ಕೇಂದ್ರ ಜಲ ಸಂಪನ್ಮೂಲ ಅಭಿವೃದ್ಧಿ ಮಂಡಲಿಗೆ ಸರ್ಕಾರಿ ಪತ್ರ ಸಂಖ್ಯೆ ಪಿಡಬ್ಲ್ಯೂಡಿ ೬೭ ಎಂಪಿಜಡ್ ೮೫ ದಿನಾಂಕ ೯-೮-೮೯ರಲ್ಲಿ ಒಪ್ಪಿಸಲಾಗಿದೆ.

ಮೇಲೆ ಹೇಳಿರುವ ಸಮಗ್ರ ಯೋಜನೆಯಡಿಯಲ್ಲಿ ಉಲ್ಲಾಳ ಗ್ರಾಮದ ತೀರಪ್ರದೇಶದ ಸಮುದ್ರದ ರಕ್ಷಣೆಗೆಂದು ಈ ಕೆಳಕಂಡ ಕೆಲಸಗಳನ್ನು ಸೇರಿಸಲಾಗಿದೆ.

೧. ಉಲ್ಲಾಳದ ಹತ್ತಿರ ೩ ಕಿ.ಮೀ. ಉದ್ದದ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣಕ್ಕೆಂದು ರೂ. ೨.೨೫ ಕೋಟಿಗಳು ಹಾಗೂ

೨. ೨ ಕಿ ಮೀ. ಉದ್ದದ ನದಿ ಮುಖಜಭೂಮಿಯ ದಂಡೆ ಸಂರಕ್ಷಣಾ ಕಾರ್ಯಕ್ಕೆ ರೂ. ೦.೪೦ ಕೋಟಿಗಳು.

ಅಲ್ಲದೆ ಈ ಸಮಗ್ರ ಯೋಜನೆಯಲ್ಲಿ ಗುರುತಿಸಲಾದ ಪ್ರದೇಶಗಳಲ್ಲಿ ಅತ್ಯಂತ ಹಾನಿಗೊಳಗಾಗುತ್ತಿರುವ ಪ್ರದೇಶಗಳ ಸಂರಕ್ಷಣೆಗೆಂದು ಸಿದ್ಧಪಡಿಸಲಾದ ರೂ. ೪೦ ಕೋಟಿಗಳ ಆಪ್ಯತಾ ಯೋಜನಾ ಪಟ್ಟಿಯಲ್ಲಿಯೂ ಕೂಡ ಉಲ್ಲಾಳ ಪ್ರದೇಶದ ೧.೭೫ ಕಿ ಮೀ. ಉದ್ದದ ತೀರ ಸಂರಕ್ಷಣೆಗೆಂದು ರೂ. ೧.೩ ಕೋಟಿಗಳನ್ನು ಮೆಚ್ಚಿ ಮಾಡಲು ಯೋಜಿಸಲಾಗಿದೆ. ಈ ಆದ್ಯತಾ ಯೋಜನೆಯನ್ನು ಸಹ ಕೇಂದ್ರ ಸರ್ಕಾರದ ಅನುಮೋದನೆಗೆ ಪಿಡಬ್ಲ್ಯೂಡಿ ೩೦೫೫ ಸೆಕ್ರೆಟರಿ: ೨-೮೯, ದಿನಾಂಕ ೧೯-೩-೮೯ರಲ್ಲಿ ಸಲ್ಲಿಸಲಾಗಿದೆ ಮತ್ತು ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ನಿರೀಕ್ಷಿಸಲಾಗಿದೆ.

ಜುಲೈ ೧೯೮೯ರಲ್ಲಿ ಉಂಟಾದ ತೀವ್ರ ಸಮುದ್ರ ಕೊರೆತದಿಂದಾಗಿ ಈ ಪ್ರದೇಶದಲ್ಲಿದ್ದ ಗ್ಲಾಡ್ ಸೋನ್ ಲೈಲ್ ಎಂಬ ದೋಣಿ ನಿರ್ಮಾಣ ಕಾರ್ಖಾನೆಯು ಹಾನಿಗೊಳಗಾಗಿ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು. ಅಲ್ಲದೆ ಉಲ್ಲಾಳದ ಸಮೀಪ ಇದ್ದ ತೆಂಗಿನ ಮರಗಳು, ಮೀನುಗಾರರ ಗುಡಿಸಲುಗಳು ತೀವ್ರ ಹಾನಿಗೆ ಒಳಗಾದವು. ದಿನಾಂಕ ೩೧-೭-೧೯೮೯ರಂದು ಸ್ಥಳಕ್ಕೆ ಭೇಟಿ ನೀಡಿದ ಮಾನ್ಯ ರಾಜ್ಯ ಪಾಲರು ಸಂರಕ್ಷಣಾ ಕೆಲಸವನ್ನು ಕೈಗೊಳ್ಳುವಂತೆ ಸೂಚನೆಯನ್ನು ನೀಡಿರುತ್ತಾರೆ.

ಅದರಂತೆ, ಈ ತೀರ ಪ್ರದೇಶದಲ್ಲಿರುವ ಇಳಕಲು ಹಾಗೂ ಅಲೆಗಳ ರೌದ್ರತೆಯನ್ನು ಗಮನದಲ್ಲಿರಿಸಿಕೊಂಡು ಒಂದು ಯೋಜನೆಯನ್ನು ೨೨.೬೦ ಲಕ್ಷ ರೂ.ಗಳಿಗೆ ಅಂದಾಜು ಮೆಚ್ಚಿದಲ್ಲಿ ಸಿದ್ಧಪಡಿಸಿದ್ದು ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಕಾರ್ಯಕ್ರಮಕ್ಕಾಗಿ ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ೩.೨೫ ಲಕ್ಷ ರೂ.ಗಳ ಅನುದಾನವನ್ನು ನೀಡಲಾಗಿದೆ. ಈ ಕಾರ್ಯಕ್ಕೆ ಟೆಂಡರ್‌ಗಳನ್ನು ಕರೆಯಲಾಗಿದ್ದು ಕೆಲಸಗಳನ್ನು ಕೈಗೆತ್ತಿಕೊಳ್ಳಲು ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳಲಾಗಿದೆ.

(3) ಹಾಸನ ಜಿಲ್ಲಾ ಪರಿಷತ್ತಿನವರು ಹಣ ದುರುಪಯೋಗ ಮಾಡಿದ್ದರ ಬಗ್ಗೆ ರಾಜ್ಯದ ಸಿ.ಓ.ಡಿ.ಯವರಿಂದ ತನಿಖೆ

ಶ್ರೀ ಬಿ. ಶಿವಣ್ಣ (ಗಂಡಸಿ).— ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲಾ ಪರಿಷತ್‌ನವರು ಹಣ ದುರುಪಯೋಗ ಮಾಡಿರುವ ಬಗ್ಗೆ ರಾಜ್ಯ ಸಿ.ಓ.ಡಿ. ಇಲಾಖೆಯು ಪತಿಯಿಂದ ತನಿಖೆ ನಡೆಯುತ್ತಿದೆ ಎಂದು ಹಾಸನದ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಇದು ನಿಜವೇ ? ಹಾಗಿದ್ದ ಪಕ್ಷದಲ್ಲಿ ಜಿಲ್ಲಾ ಪರಿಷತ್ ಆಡಳಿತಕ್ಕೊಳಪಡುವ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಮತ್ತು ಯಾವ ರೀತಿಯ ನಿಯಮಗಳು ಉಲ್ಲಂಘನೆಯಾಗಿವೆ? ಈ ಹಣ ದುರುಪಯೋಗವಾಗಿರುವುದಕ್ಕೆ ಆಗಿನ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯದರ್ಶಿಯವರ ಪಾತ್ರವಿದೆಯೇ? ಇಲ್ಲದಿದ್ದಲ್ಲಿ ಅವರನ್ನು ಕಡ್ಡಾಯ ರಜೆಯ ಮೇಲೆ ಸರ್ಕಾರ ಕಳುಹಿಸಲು ಕಾರಣವೇನು? ಈ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುತ್ತೇನೆ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)— ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಸಿ.ಓ.ಡಿ.ಗೆ ಒಪ್ಪಿಸಿದ್ದೇವೆ. ಇದು ಇನ್ನೂ ತನಿಖೆಯ ಹಂತದಲ್ಲೇ ಇದೆ. ತನಿಖೆ ಪೂರ್ಣಗೊಂಡು ವರದಿ ಬಂದಕೂಡಲೇ ತಮಗೆ ತಿಳಿಸುತ್ತೇನೆ.

ಶ್ರೀ ಬಿ. ಶಿವರಾಮು.— ಹಾಸನದ ಜಿಲ್ಲಾಪರಿಷತ್‌ನ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಆಫೀಸಿನ ರೆಕಾರ್ಡ್ಸ್‌ನ್ನು ಯಾರಿಗೂ (ಸಿ.ಓ.ಡಿ. ಅಧಿಕಾರಿಗಳಿಗೆ) ಕೊಡಬಾರದೆಂದು ತಿಳಿಸಿದ್ದಾರೆಂದು ತಿಳಿದು ಬಂದಿದೆ. ಇದು ನಿಜವೇ?

ಶ್ರೀ ಎಂ.ವೈ. ಘೋರ್ಪಡೆ.— ಹಾಗೆ ಹೇಳುವುದು ಸರಿಯಲ್ಲ. ಮಾರ್ಚ್ ತಿಂಗಳಲ್ಲಿ ಈ ದೂರು ಸರ್ಕಾರಕ್ಕೆ ಬಂದ ಕೂಡಲೆ ಇದನ್ನು ಸಿ.ಓ.ಡಿ. ಯವರಿಂದ ಎನ್‌ಕ್ವೈರಿ ಮಾಡಿಸಬೇಕೆಂದು ಆದೇಶ ನೀಡಿದರು. ಅದರ ಪ್ರಕಾರ ಈಗ ಎನ್‌ಕ್ವೈರಿ ನಡೆಯುತ್ತಿದೆ. ಮೇ ೧೭ನೇ ತಾರೀಖು ಸಿ.ಓ.ಡಿ. ಯವರಿಂದ ಪತ್ರಬಂದಿದೆ. ಇದು ಇನ್ನೂ ಎನ್‌ಕ್ವೈರಿ ಆಗುತ್ತಿದೆ ಎಂದು ತಿಳಿದು ಬಂದಿದೆ. ಇದು ಏಪ್ರಿಲ್ ತಿಂಗಳಲ್ಲಿ ಟ್ರಾನ್ಸ್‌ಫರ್ ಆಗಿದೆ. ಇದರಲ್ಲಿ ಯಾವುದೇ ರೀತಿಯ ನಿರ್ಲಕ್ಷತೆಯೂ ನಡೆದಿಲ್ಲ. ಸಿ.ಓ.ಡಿ.ಯವರಿಂದ ವರದಿ ಬಂದಕೂಡಲೇ ತಮಗೆ ತಿಳಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಸಭೆಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗ್ಡೆ ಅವರು ದಿನಾಂಕ ೧೩ನೇ ಜೂನ್ ೧೯೯೦ ರಿಂದ ೧೪ನೇ ಜೂನ್ ೧೯೯೦ರ ವರೆಗೆ ಜೀನಾದೇಶಕ್ಕೆ ಒಂದು ನಿಯೋಗದ ಮುಂದಾಳತ್ವ ವಹಿಸಿ ಹೋಗಲಿರುವುದರಿಂದ ವಿಧಾನ ಸಭೆಯ ಅಧಿವೇಶನಕ್ಕೆ ದಿನಾಂಕ ೪-೬-೧೯೯೦ ರಿಂದ ೧೪-೬-೧೯೯೦ರ ವರೆಗೆ ಗೈರು ಹಾಜರಾಗಿಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ರಾಮಕೃಷ್ಣ ಹೆಗ್ಡೆ ಅವರು ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ?

ಮಾನ್ಯ ಸದಸ್ಯರು.—ಆಗಬಹುದು.

ಅಧ್ಯಕ್ಷರು ರಾಮಕೃಷ್ಣ ಹೆಗ್ಡೆ ಅವರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಕಾವೇರಿ ಜಲ ವಿವಾದದ ಬಗ್ಗೆ ಚರ್ಚೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದವನ್ನು ಪಂಚಾಯತ್ ಮಂಡಳಿಗೆ ಒಪ್ಪಿಸಿರುವುದನ್ನು ವಿರೋಧಿಸಿ ನಿನ್ನೆಗಾಗಲೇ ನಾವು ರಾಜ್ಯಾದ್ಯಂತ ಪ್ರತಿಭಟನೆಯನ್ನು ಪ್ರಾರಂಭಿಸಿದ್ದೇವೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದು ಕೂಡ ಸ್ಪಷ್ಟವಾಗಿ ಗೊತ್ತಿದೆ. ತಮ್ಮ ಮೂಲಕ ಮತ್ತೊಮ್ಮೆ ಇವತ್ತು ಸರ್ಕಾರದ ಗಮನಕ್ಕೆ ತರಬಯಸಿರುವುದೇನೆಂದರೆ ಈ ಸಭೆಯಲ್ಲಿ ಕಾವೇರಿ ನೀರಿನ ಬಗ್ಗೆ ಚರ್ಚೆ ನಡೆಯತಕ್ಕ್ಕಂಥದ್ದು ಸರ್ಕಾರಕ್ಕೆ ಮೊದಲೇ ಗೊತ್ತಿತ್ತು, ಆದರೂ ಕೂಡ ಎರಡು ದಿವಸಗಳಿಂದಲೂ ಚರ್ಚೆ ನಡೆಯುತ್ತಿದ್ದರೂ ಸರ್ಕಾರದವರು ನಮ್ಮ ಯಾವ ಸದಸ್ಯರಿಗೂ ಸುಪ್ರೀಂ ಕೋರ್ಟಿನ ತೀರ್ಪನ್ನಾಗಲಿ ಮತ್ತು ಸರ್ಕಾರ ಇದುವರೆಗೆ ಕಾವೇರಿ ಪಂಚಾಯತ್ ಬಗ್ಗೆ ಕೇಂದ್ರ ಸರ್ಕಾರದೊಡನೆ ಏನೇನು ವ್ಯವಹಾರ ನಡೆಸಿದೆ ಅದರ ಕಾಗದಪತ್ರಗಳು ನಮ್ಮಮುಂದೆ ಇಲ್ಲ. ಬಹುಶಃ ಅನೇಕ ಜನ ಮಾನ್ಯ ಸದಸ್ಯರು ಇದರ ಬಗ್ಗೆ ತಿಳಿಯಬೇಕೆಂಬ ಅಕಾಂಕ್ಷೆಯನ್ನು ಹೊಂದಿರತಕ್ಕಂಥವರಿಗೆ ಇನ್ನು ಸಿಕ್ಕಿಲ್ಲ. ನಾನೂ ಕೂಡ ಈ ಮಾತನ್ನು ಸರ್ಕಾರದ ಮುಂದೆ ಇಟ್ಟಿದ್ದೆ. ಸರ್ಕಾರ ಇವತ್ತಾದರೂ ಇಡಬಹುದಾಗಿತ್ತು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದದಬಗ್ಗೆ ಏನೇನು ಡಾಕ್ಯುಮೆಂಟ್ಸ್ ಬೇಕಾದರೂ ಅದನ್ನು ಮಾನ್ಯ ಸದಸ್ಯರಿಗೆ ಕೊಡಲು ತಯಾರಿಗಿದ್ದೇವೆ. ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್ ಕಾಪಿಯನ್ನು ಕೇಳಿದರೂ ಅದನ್ನು ಕೊಡಲು ತಯಾರಾಗಿದ್ದೇವೆ. ಮತ್ತೆ ನಾವು ಏನೇನು ಪತ್ರವ್ಯವಹಾರಗಳನ್ನು ಮಾಡಿದ್ದೇವೆ ಅದನ್ನೂ ಕೂಡ ಕೊಡಲು ತಯಾರಾಗಿದ್ದೇವೆ ಇದರಲ್ಲೇನು ಪಂಚ್ಚುಮರೆಯಿಲ್ಲ. ಇನ್‌ಫರ್‌ಮೇಷನನ್ನು ಸಪ್ಲೈಸ್ ಮಾಡಬೇಕೆಂಬ ಇಚ್ಛೆ ಸರ್ಕಾರಕ್ಕಿಲ್ಲ. ಈ ಪ್ರಶ್ನೆ ಎಲ್ಲರಿಗೂ ಗೊತ್ತಿದೆ, ಆದು ಅಲ್ಲದೆ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಹಂತಹಂತದಲ್ಲೂ ಈ ಬಗ್ಗೆ ಸಮಾಲೋಚನೆ ಮಾಡುತ್ತಿರುವುದರಿಂದ ಅದರ ಅವಶ್ಯಕತೆ ಇಲ್ಲವೆಂದು ಭಾವಿಸಿದ್ದೆ. ಆದರೆ ಈಗ ಏನು ಇನ್‌ಫರ್‌ಮೇಷನ್ ಕೇಳಿದರೂ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮುಚ್ಚಿಡುತ್ತಿದ್ದಾರೆ ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ಆದರೆ ಪ್ರತಿಯೊಬ್ಬ ಸದಸ್ಯರಿಗೂ ಅದರ ವಿವರಗಳು ದೊರೆತು ವಿಚಾರ ಅರ್ಥವಾಗಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.